**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ.ನಂಃ 10007 / 2023**

**ಚಾಸಾ ಃ 06**
**ಪ್ರಾಸಾ ಃ 15**

| | | |
|---|---|---|
| **ಹೆಸರು** | ಃ | ಲಕ್ಷ್ಮೀಪತಿ |
| **ತಂದೆ ಹೆಸರು** | ಃ | ದ್ಯಾವಣ್ಣ |
| **ವಯಸ್ಸು** | ಃ | 39 ವರ್ಷ |
| **ವೃತ್ತಿ** | ಃ | ಬಿಲ್ ಕಲೆಕ್ಟರ್, ಅರಕೇರೆ ಗ್ರಾಮ ಪಂಚಾಯಿತಿ, |
| **ವಾಸ** | ಃ | ಬೈರಾಪುರ, ಯಲಹಂಕ ತಾಲ್ಲೂಕು. |

**ಈ ದಿನ ದಿನಾಂಕಃ 04-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ**

ಕಳೆದ 21 ವರ್ಷದಿಂದ ನಾನು ಅರಕೇರೆ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ ರಾಗಿ ಕೆಲಸ ಮಾಡುತ್ತಿದ್ದೇನೆ.

2. ದಿನಾಂಕ 17.01.2023 ರಂದು ನಾನು ಮತ್ತು ಚಾಸಾ-5 ತಿಮ್ಮರಾಜು ರವರು ಪಂಚಾಯಿತಿ ಕಛೇರಿಯಲ್ಲಿ ಕರ್ತವ್ಯದಲ್ಲಿದ್ದೇವು. ನಮ್ಮ ಮೇಲಾಧಿಕಾರಿ ಪಿ ಡಿ ಓ ರವರಿಗೆ ರಾಜಾನುಕುಂಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೊಲೆಯಾಗಿದ್ದು, ಆ ಸಂಬಂಧ ಪಂಚರಾಗಿ ಕಳುಹಿಸುವಂತೆ ಠಾಣಾಧಿಕಾರಿಯವರು ತಿಳಿಸಿದ್ದರಿಂದ ಸದರಿಯವರು ನಮ್ಮನ್ನು ಠಾಣೆಗೆ ಹೋಗುವಂತೆ ತಿಳಿಸಿದ್ದರಿಂದ ಆ ಪ್ರಕಾರವಾಗಿ ನಾವು ಸಂಜೆ 6-00-6-15 ಗಂಟೆ ಸುಮಾರಿಗೆ ಠಾಣೆಗೆ ಹೋಗಿರುತ್ತೇವೆ.

3. ಠಾಣೆಗೆ ಹೋದಾಗ ಕೊಲೆಯಾಗಿರುತ್ತದೆ, ಮಹಾಜರ್ ಗೆ ಹೋಗಬೇಕೆಂದು ತಿಳಿಸಿ ನೋಟೀಸು ನೀಡಿ ನಮ್ಮ ಸಹಿ ಪಡೆದುಕೊಂಡಿರುತ್ತಾರೆ. ಸದರಿ ನೋಟೀಸ್ಸನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-33 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-33(ಎ) ಎಂದು ಗುರುತಿಸಲಾಯಿತು.

4. ನಂತರ ಪೊಲೀಸ್ ಠಾಣೆಯಿಂದ ನಾನು, ತಿಮ್ಮರಾಜು ಮತ್ತು 4-5 ಜನ ಪೊಲೀಸರು ಜಿಪಿನಲ್ಲಿ ಶಾನುಭೋಗನಹಳ್ಳಿಗೆ ಹೋಗಿ ಅಲ್ಲಿಂದ ಸರ್ವೇ ನಂ. 21 / 1 ರ ಜಮೀನಿಗೆ ಹೋಗಿರುತ್ತೇವೆ. ಅಲ್ಲಿಗೆ ಹೋದಾಗ ಸುಮಾರು 7-00 ಗಂಟೆಯಾಗಿತ್ತು. ಅಲ್ಲಿ ಹೋಗಿ ಸ್ಥಳವನ್ನು ಪರಿಶೀಲಿಸಿದ್ದು ನೋಡಿದಾಗ ಅಲ್ಲಿ ಕೊಲೆಯಾಗಿತ್ತು. ಪೊಲೀಸರು ಬಿಟ್ಟು ಎಫ್.ಎಸ್.ಎಲ್ ರವರೂ ಸಹ ಅಲ್ಲಿ ಇದ್ದರು. ಎರಡು ಕಡೆ ಸ್ಥಳ ಪರಿಶೀಲಿಸಿರುತ್ತಾರೆ, ಒಂದು ಕಡೆ ಏಳು ವಸ್ತುಗಳನ್ನು ಮತ್ತು ಇನ್ನೊಂದು ಕಡೆ ಎಂಟು ವಸ್ತುಗಳನ್ನು ಎಫ್.ಎಸ್.ಎಲ್ ತಂಡದವರು ಎಲ್ಲವನ್ನು ತೆಗೆದುಕೊಟ್ಟು ಪೊಲೀಸರಿಗೆ ಕೊಟ್ಟಿರುತ್ತಾರೆ. ಅಲ್ಲಿ ಪೊಲೀಸರು ಮಹಾಜರ್ ಮಾಡಿರುತ್ತಾರೆ. ಆಗ ಸಮಯ ಸಂಜೆ 7-00 ಗಂಟೆಯಿಂದ ರಾತ್ರಿ 10-00 ಗಂಟೆಯಾಗಿತ್ತು. ಸದರಿ ಮಹಾಜಾರನ್ನು ಈಗ ನೋಡಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಪೋಟೋಗಳನ್ನು ತೆಗೆದುಕೊಂಡಿರುತ್ತಾರೆ. ಅವುಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನಿಪಿ-21 ಮತ್ತು ನಿಪಿ-22 ಎಂದು ಗುರುತಿಸಲಾಗಿರುತ್ತದೆ. ಆ ದಿನ ಅಮಾನತ್ತು ಪಡಿಸಿಕೊಂಡ ಸ್ವತ್ತುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ವಸ್ತುಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮುದ್ದೆ ಮಾಲು 1 ರಿಂದ 5, 25, 25(ಎ), 6, 13, 8, 7, 9 ರಿಂದ 11, 26 ಮತ್ತು 12 ಎಂದು ಗುರುತಿಸಲಾಗಿರುತ್ತದೆ. ಅವುಗಳ ಮೇಲೆ ಅಂಟಿಸಿರುವ ಚೀಟಿಗಳಲ್ಲಿ ನನ್ನ ಸಹಿ ಇರುತ್ತದೆ.

( **ಪಾಟೀ ಸವಾಲು - ಆರೋಪಿ ಪರ ವಕೀಲರನ್ನು ಕರೆಸಲಾಯಿತು ಗೈರುಹಾಜರಿರುತ್ತಾರೆ. ಯಾರು ಪ್ರತಿನಿಧಿಸಿರುವುದಿಲ್ಲ. ಆರೋಪಿಯಲ್ಲಿ ವಕೀಲರ ಬಗ್ಗೆ ವಿಚಾರಿಸಿದಾಗ ಪ್ರತಿ ಮುದ್ದಂತಿನಂದು ವಕೀಲರು ಬರುತ್ತಾರೆಂದು ತಿಳಿಸಿರುತ್ತಾರೆಯೇ ವಿನಃ ವಕೀಲರು ಹಾಜರಾಗಿ ಪಾಟೀ ಸವಾಲು ಮಾಡಿರುವುದಿಲ್ಲ. ಆದ್ದರಿಂದ ಆರೋಪಿ ಪರವಾಗಿ ಪಾಟೀ ಸವಾಲು ಇರುವುದಿಲ್ಲವೆಂದು ಪರಿಗಣಿಸಲಾಗಿರುತ್ತದೆ.)**

**(**ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
**ದೊಡ್ಡಬಳ್ಳಾಪುರ.**